ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಸೋಮವಾರ, ದಿನಾಂಕ : 28 ನೇ ಸೆಪ್ಟೆಂಬರ್, 2020

ಸಾರ್ವಜನಿಕ ಶಿಕ್ಷಣ ಇಲಾಖೆಯ ಬೋಧಕೇತರ ನೌಕರರ

ಸಿ & ಆರ್ ಕುರಿತು

ಶ್ರೀ ನಸೀರ್ ಅಹ್ಮದ್ (ವಿಧಾನಸಭೆಯಿಂದ ಚುನಾಯಿತರಾದವರು):-

806 (985) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸಾರ್ವಜನಿಕ ಶಿಕ್ಷಣ ಇಲಾಖೆಯ ಬೋಧಕೇತರ ನೌಕರರ ಸಿ & ಆರ್ (ವೃಂದ ಮತ್ತು ನೇಮಕಾತಿ)ನ್ನು ಯಾವ ದಿನಾಂಕದಿಂದ ಹೊರಡಿಸಲಾಗಿದೆ ;

(ಆ) ಲೆಕ್ಕ ಅಧೀಕ್ಷಕರ ಹುದ್ದೆಗೆ ಬಡ್ತಿಯನ್ನು ಪಡೆದುಕೊಂಡವರು ದ್ವಿತೀಯ ದರ್ಜೆ ಸಹಾಯಕರ ಹಾಗೂ ಪ್ರಥಮ ದರ್ಜೆ ಸಹಾಯಕರಾಗಿ ಕಾರ್ಯನಿರ್ವಹಿಸಿ ಆಡಳಿತ ಮತ್ತು ಲೆಕ್ಕ ಪತ್ರಗಳ ವಿಷಯಗಳನ್ನು ತಿಳಿಯದ ಕಾರಣ ಅಧೀಕ್ಷಕರನ್ನೂ ಸಹ ಆಡಳಿತ ವಿಭಾಗ ವಿಷಯಕ್ಕೆ ನಿಯೋಜಿಸಲು ಇರುವ ತೊಂದರೆ ಏನು ;

(ಇ) ಲೆಕ್ಕ ಅಧೀಕ್ಷಕರನ್ನು ಪತ್ರಾಂಕಿತ ವ್ಯವಸ್ಥಾಪಕರ ಜ್ಯೇಷ್ಠತೆಯಲ್ಲಿ ಪರಿಗಣಿಸಲು ಇರುವ ತೊಂದರೆ ಏನು ; ತೊಂದರೆ ನಿವಾರಣೆಯಾದ ನಂತರ ಎಷ್ಟು ದಿನಗಳ ಒಳಗೆ ಲೆಕ್ಕ ಅಧೀಕ್ಷಕರ ಹುದ್ದೆಗೆ ಬಡ್ತಿ ಹೊಂದಿದ ದಿನಾಂಕದಿಂದ ಪರಿಷ್ಕೃತ ಜ್ಯೇಷ್ಠತಾ ಪಟ್ಟಿಯನ್ನು ಹೊರಡಿಸಲಾಗುವುದು ;

(ಈ) ಪತ್ರಾಂಕಿತ ವ್ಯವಸ್ಥಾಪಕರು ಹಾಗೂ ಲೆಕ್ಕ ಅಧೀಕ್ಷಕರು ಎರಡು ಹುದ್ದೆಗಳು ಒಂದೇ ವೇತನ ಶ್ರೇಣಿಯನ್ನು ಹೊಂದಿದ್ದು ಎರಡು `ಬಿ' ಗುಂಪು ಹುದ್ದೆಗಳಾಗಿದ್ದು ಪತ್ರಾಂಕಿತ ವ್ಯವಸ್ಥಾಪಕರಿಗೆ ಮಾತ್ರ ಪತ್ರಾಂಕಿತ ಸಹಾಯಕರ ಹುದ್ದೆಗೆ ಬಡ್ತಿಯನ್ನು ನೀಡಿದ್ದು ಲೆಕ್ಕ ಅಧೀಕ್ಷಕರಿಗೂ ಸಹ ಪತ್ರಾಂಕಿತ ವ್ಯವಸ್ಥಾಪಕರ ಜ್ಯೇಷ್ಠತೆಯಲ್ಲಿ ಪರಿಗಣಿಸಿ ಅವರಿಗೂ ಸಹ ಪತ್ರಾಂಕಿತ ಸಹಾಯಕರ ಹುದ್ದೆಗೆ ಬಡ್ತಿ ನೀಡಲು ಎಷ್ಟು ದಿನಗಳ ಕಾಲಾವಕಾಶ ಬೇಕಾಗಿದೆ ?